**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಸಿಸಿ ನಂಃ 894/2020

ಸಿ ಡಬ್ಲುಃ 16

ಪಿ ಡಬ್ಲುಃ 8

| | |
|---|---|
| ಸಾಕ್ಷಿದಾರರ ಹೆಸರು | ಲೋಕೇಶ್ ಅರಶಿಣಗುಪ್ಪಿ |
| ತಂದೆಯ ಹೆಸರು | ಅಣ್ಣಪ್ಪ ಅರಶಿಣಗುಪ್ಪಿ |
| ವಯಸ್ಸು | 43 |
| ಉದ್ಯೋಗ | ಹೆಡ್ ಕಾನ್ಸಟೇಬಲ್ |
| ವಾಸ್ತವ್ಯ | ಕುಮಟಾ |

ಸಾಕ್ಷಿಯನ್ನು ದಿನಾಂಕ **01-04-2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕ ರವರಿಂದಃ**

ನಾನು, 2011 ರಿಂದ 2022 ರವರೆಗೆ ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಕಾನ್ಸಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06-12-2017 ರಂದು ರಾತ್ರಿ 9-00 ಗಂಟೆಗೆ ನಾನು ಹೊನ್ನಾವರ ಪೊಲೀಸ ಠಾಣೆಯಲ್ಲಿ ಇದ್ದಾಗ ಆ ದಿನ ಸಾಯಂಕಾಲ ಹೊನ್ನಾವರದ ಗೇರುಸೊಪ್ಪ ಸರ್ಕಲ್ ನಲ್ಲಿ ನಡೆದ ಆಟೋ ಮತ್ತು ಬೈಕ್ ಅಪಘಾತಗಳ ವಿಚಾರವಾಗಿ ಆಟೋ ಮಾಲೀಕ ಗಿರೀಶ ಮೇಸ್ತ, ಬೈಕ್ ಮಾಲಿಕ ರಫೀಕ್ ಇವರ ನಡುವೆ ವಾದ-ವಿವಾದ ನಡೆದು, ಆ ಸಂದರ್ಭದಲ್ಲಿ ಹಿಂದೂ ಮತ್ತು ಮುಸ್ಲಿಂ ಜನರು ಸೇರಿಕೊಂಡು ಗಲಭೆ ಮಾಡುತ್ತಾ ಹೊನ್ನಾವರದ ಗುಡ್ ಲಕ್ ಸರ್ಕಲ್ ಹತ್ತಿರ ಹೋಗಿ ಗಲಭೆ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಂತೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿದ್ದ ಚಾಸಾ11 ರವರು ನನಗೆ ಮತ್ತು ಚಾಸಾ12 ರಿಂದ 14 ರವರಿಗೆ ಮತ್ತು ಚಾಸಾ17 ರಿಂದ 19 ರವರಿಗೆ ಸಂಗಡ ಕರೆದುಕೊಂಡು ಗಲಭೆ ನಡೆಯುತ್ತಿದ್ದ ಗುಡ್ ಲಕ್ ಸರ್ಕಲ್ ಹತ್ತಿರ ಕರೆದುಕೊಂಡು ಹೋದರು. ಆ ಸ್ಥಳದಲ್ಲಿ ಸುಮಾರು 70 ರಿಂದ 80 ಜನ ಮುಸ್ಲಿಂ ಕೋಮಿನ ಜನರು ಕೈಯಲ್ಲಿ ಕಟ್ಟಿಗೆ ಬಡಿಗೆ, ಕಬ್ಬಿಣದ ರಾಡ್, ಗ್ಲಾಸಿನ ಬಾಟಲಿಗಳನ್ನು ಹಿಡಿದುಕೊಂಡು ಕೂಗುತ್ತಾ " ನಾರೇತಕ್ವೀರ್ ಅಲ್ಲಾಹು ಅಕ್ಬರ್ " ಎಂದು ಕೂಗುತ್ತಾ ಇವತ್ತು ಹಿಂದೂ ಜನರನ್ನು ಬಿಡಬಾರದು ಎಂದು ಕೂಗುತ್ತಿದ್ದರು. ಅವರ ವಿರುದ್ಧ ದಿಕ್ಕಿನಲ್ಲಿ ಅಂದರೆ ದುರ್ಗಾಕೇರಿ ಹೋಗುವ ರಸ್ತೆಯ ಬದಿಯಲ್ಲಿ ಸುಮಾರು 70-80 ಹಿಂದೂ ಜನರು ಸಹ ತಮ್ಮ ಕೈಯಲ್ಲಿ ಕಟ್ಟಿಗೆ ಬಡಿಗೆ, ಕಲ್ಲು, ಕಬ್ಬಿಣದ

ರಾಡ್ ಮತ್ತು ಬಾಟಲಿಗಳನ್ನು ಹಿಡಿದುಕೊಂಡು "ಜೈ ಶ್ರೀರಾಮ್ " ಎಂದು ಘೋಷಣೆ ಕೂಗುತ್ತಾ, ಇವತ್ತು ಮುಸ್ಲಿಂ ಜನರನ್ನು ಬಿಡಬಾರದು, ಹೊಡೆಯಲೇ ಬೇಕು ಎಂದು ಹೇಳುತ್ತಾ ಒಬ್ಬರಿಗೊಬ್ಬರು ಹಿಂದೂ ಮತ್ತು ಮುಸ್ಲಿಂ ಜನರ ಕೋಮು ಸೌಹಾರ್ದತೆಗೆ ದಕ್ಕೆ ತರುವ ಹಾಗೆ ಹಾಗೂ ಧರ್ಮ, ಧರ್ಮ ಗಳ ನಡುವೆ ದ್ವೇಷವನ್ನು ಹುಟ್ಟು ಹಾಕುವ ಸಂಬಂಧ ಒಬ್ಬರಿಗೊಬ್ಬರು ಕಲ್ಲುಗಳನ್ನು ತೂರಾಡುತ್ತಾ ದೊಂಬಿ ಎಬ್ಬಿಸಿದ್ದರು. ಆಗ ಸ್ಥಳದಲ್ಲಿದ್ದ ನಾವೆಲ್ಲಾ ಪೊಲೀಸರು ಎರಡೂ ಕೋಮಿನ ಜನರಿಗೆ ಹೀಗೆಲ್ಲಾ ಮಾಡಬೇಡಿ ಎಂದು ಚದುರಿಸಲು ಹೋದಾಗ, ಅವರು ನಮ್ಮ ಮಾತನ್ನು ದಿಕ್ಕರಿಸಿ ಪೊಲೀಸರಿಗೂ ಸಹ "ಬೋಳಿಮಕ್ಕಳೆ" ಎಂದು ಅವಾಚ್ಯ ಶಬ್ಧಗಳಿಂದ ಬೈದು ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಅಷ್ಟರಲ್ಲಿ ಚಾಸಾ1 ಮತ್ತು 15 ರವರು ಇದ್ದ ಹೈವೇ ಪೆಟ್ರೋಲಿಂಗ್ ವಾಹನ ನಂ. ಕೆ ಎ 03 ಜಿ 1510 ವಾಹನದ ಮೇಲಾಗಿ ಸ್ಥಳಕ್ಕೆ ಬಂದಿದ್ದು, ಅವರೂ ಸಹ ನಮ್ಮ ಜೊತೆಗೂಡಿ ಜನರನ್ನು ಚದುರಿಸಲು ಪ್ರಾರಂಭಿಸಿದರು. ಅಷ್ಟರಲ್ಲಿ ಅವರಲ್ಲಿದ್ದ ಒಬ್ಬ ಮೊಹಮ್ಮದ್ ಶರೀಫ್ ಎಂಬ ವ್ಯಕ್ತಿ ಒಂದು ಕಲ್ಲನ್ನು ತೆಗೆದುಕೊಂಡು ಬೀಸಿದ್ದು, ಅದು ಚಾಸಾ1 ರವರ ಬೆನ್ನಿಗೆ ತಾಗಿರುತ್ತದೆ. ಅಲ್ಲದೇ ಎರಡೂ ಗುಂಪಿನವರೂ ಸಹ ಒಬ್ಬರಿಗೊಬ್ಬರು ಕಲ್ಲು ಬಾಟಲಿಗಳನ್ನು ತೂರಾಡುತ್ತಾ ದೊಂಬಿ ಎಬ್ಬಿಸಿರುತ್ತಾರೆ. ಈ ಘಟನೆಯಲ್ಲಿ ಚಾಸಾ1 ಮತ್ತು 11 ಮತ್ತು 12 ರವರಿಗೆ ಸಣ್ಣಪುಟ್ಟ ಗಾಯಗಳಾಗಿರುತ್ತದೆ. ಈ ಘಟನೆಯ ಬಗ್ಗೆ ಚಾಸಾ1 ರವರು ದಿಃ 06-12-2017 ರಂದು ಹೊನ್ನಾವರ ಪೊಲೀಸ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಚಾಸಾ43 ರವರ ಮುಂದೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಆ ದಿವಸ ದೊಂಬಿಯ ಸಂದರ್ಭದಲ್ಲಿ ಪೊಲೀಸರ ಎರಡು ಬೈಕ್ ಗಳಿಗೆ, ಸಾರ್ವಜನಿಕರ 4 ಬೈಕ್ ಗಳಿಗೆ ದೊಂಬಿಕಾರರು ಹಾನಿಪಡಿಸಿರುತ್ತಾರೆ. ಆ ದಿನದಂದು ಗಲಭೆಪಡಿಸಿದ ಆರೋಪಿತರನ್ನು ನಾನು ನೋಡಿದ್ದು, ಅವರು ಈಗ ನ್ಯಾಯಾಲಯದ ಮುಂದಿರುವ ಆರೋಪಿತರೇ ಇರುತ್ತಾರೆ. ಸಾಕ್ಷಿಗೆ ಚಾಸಾ1 ರವರಿಗೆ ಮೊಹಮ್ಮದ್ ಶರೀಫ್ ಎಂಬ ವ್ಯಕ್ತಿ ಕಲ್ಲು ಹೊಡೆದದ್ದು ಆತನನನ್ನು ಗುರುತಿಸಲು ಸಾಕ್ಷಿಗೆ ಕೇಳಿದಾಗ ಸಾಕ್ಷಿಯು ಘಟನೆ ನಡೆದು 7-8 ವರ್ಷಗಳಾಗಿರುವುದರಿಂದ ಮುಖಚರ್ಯೆ ಬದಲಾವಣೆ ಆಗಿರುವುದರಿಂದ ಗುರುತಿಸಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. ಘಟನೆಗಾಗಿ ಬಳಸಿದ ಸ್ವತ್ತುಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ನೋಡಿ ಗುರುತಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲು 1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ3 ರಿಂದ 5 ರಲ್ಲಿರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ.ವಿ ಆರ್ ಎನ್., ವಕೀಲರಿಂದಃ**

ನನಗೆ ಪಿ ಎಸ್ ಐ ರವರು ಹೇಳುವ ಮುಂಚೆ ಅಪಘಾತದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಆ ದಿವಸ ನಾವು ಸಿಎಂ ಬಂದೋಬಸ್ತ್ ಗೆ ಕುಮಟಾಗೆ ಹೋಗಿದ್ದೆವು. ಮಾಹಿತಿ ಬಂದಾಗ ಹೊನ್ನಾವರ ಪೊಲೀಸ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೆನು. ಅಪಘಾತವಾದಾಗ ರಿಕ್ಷಾ ಹಾಗೂ ಮೋಟಾರ ಸೈಕಲನ್ನು ನಮ್ಮ ಠಾಣೆಗೆ

ತಂದ ಬಗ್ಗೆ ನನಗೆ ತಿಳಿದಿಲ್ಲ. ಗಿರೀಶ್ ಮೇಸ್ತ ಹಾಗೂ ಮೋಟಾರ ಸೈಕಲ್ ಸವಾರ ರಫೀಕ್ ಅವರು ಠಾಣೆಗೆ ಬಂದಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ದೊಂಬಿಯ ಪೂರ್ವದಲ್ಲಿ ರಾತ್ರಿ 8 ಗಂಟೆಯಿಂದ 9 ಗಂಟೆಯ ಸಮಯಕ್ಕೆ ಸರ್ಕಾರಿ ಆಸ್ಪತ್ರೆಗೆ ನಾನು ಹೋದದ್ದು ಇರುವುದಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಜನ ಸೇರಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಠಾಣೆಯಲ್ಲಿದ್ದಾಗ ರಾತ್ರಿ 9-00 ಗಂಟೆಗೆ ಅಪಘಾತದ ಬಗ್ಗೆ ಮಾಹಿತಿ ಬಂದಿತ್ತು. ನಾನು ಹೋದಾಗ ಎರಡು ಕೋಮಿನ ಜನರು ಅಂದರೆ ಮುಸ್ಲಿಂ ಕೋಮಿನ ಜನರು ಗುಡ್ ಲಕ್ ಹೋಟೇಲ್ ಭಾಗದಲ್ಲಿ, ಹಿಂದೂ ಕೋಮಿನ ಜನರು ದುರ್ಗಾಕೇರಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಭಾಗದಲ್ಲಿ ಇದ್ದರು. ಅದರ ಸುತ್ತಾಮುತ್ತಲೂ ಸಾಕಷ್ಟು ಕಟ್ಟಡಗಳು ಇದ್ದು ಅಲ್ಲಿ ಸಾಕಷ್ಟು ಸಿಸಿಟಿವಿ ಕ್ಯಾಮೆರಾಗಳು ಇವೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ದುರ್ಗಾಕೇರಿ ಹೋಗುವ ರಸ್ತೆಯ ಪಕ್ಕದಲ್ಲಿ ಬಾಲೇರಿ ಕಾಂಪ್ಲೆಕ್ಸ ಮತ್ತು ಮಿಲಾಗ್ರಿಸ್ ಬ್ಯಾಂಕ್,ಶನಿ ದೇವಸ್ಥಾನ ಇದೆ ಎಂದರೆ ಸಾಕ್ಷಿಯು ಮಿಲಾಗ್ರಿಸ್ ಬ್ಯಾಂಕ್ ಇದೆ, ಬಾಲೇರಿ ಕಾಂಪ್ಲೆಕ್ಸ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಶನಿ ದೇವಸ್ಥಾನಕ್ಕೆ ಸಿಸಿಟಿವಿ ಅಳವಡಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ತನಿಖಾ ಸಹಾಯಕನಾಗಿ ಕೆಲಸ ಮಾಡಿದ್ದು ಇರುವುದಿಲ್ಲ. ನಾವು ಎರಡೂ ಕೋಮಿನ ಜನರನ್ನು ಚುದುರಿಸಿದ್ದೆವು. ನಾವು ಹೋಗುವ ಸಮಯಕ್ಕೆ ಕೇವಲ 8 ರಿಂದ 10 ಜನ ಪೊಲೀಸರು ಇದ್ದೆವು. ಆ ನಂತರದಲ್ಲಿ ಉಳಿದ ಸುಮಾರು ಪೊಲೀಸರು ಘಟನೆಯ ವಿಷಯ ತಿಳಿದು ಸ್ಥಳಕ್ಕೆ ಬಂದಿರುತ್ತಾರೆ. ನನಗೆ ಇವಾಗ ಕಲ್ಲು ಹೊಡೆದದ್ದು ಯಾರು ಎಂದು ಗುರುತಿಸಲು ಸಾಧ್ಯವಿಲ್ಲ. ಘಟನೆಯು 9 ರಿಂದ 11 ಗಂಟೆಯವರೆಗೆ ನಡೆದಿದೆ. ಎರಡೂ ಕೋಮಿನ ಜನರು ಸುಮಾರು ಅರ್ಧ ಗಂಟೆ ಸ್ಥಳದಲ್ಲಿ ಇದ್ದದ್ದು ಇರಬಹುದು. ನಮ್ಮ ಬಳಿ ಮೊಬೈಲ್ ಕ್ಯಾಮೆರಾ ಎಲ್ಲಾ ಇತ್ತು. ಠಾಣೆಯಿಂದ ಹ್ಯಾಂಡ್ ಕ್ಯಾಮೆರ ತೆಗೆದುಕೊಂಡು ಹೋಗಿದ್ದು ಇರುವುದಿಲ್ಲ. ನಾವು ಆ ಸಂದರ್ಭದಲ್ಲಿ ಮೊಬೈಲ್ ಕ್ಯಾಮೆರಾದಲ್ಲಿ ವಿಡಿಯೋ ಮಾಡಿದ್ದು ಇರುವುದಿಲ್ಲ. ಹೈವೇ ಪೆಟ್ರೋಲ್ ವಾಹನದಲ್ಲಿ ಕ್ಯಾಮೆರಾ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಹೈವೇ ಪೆಟ್ರೋಲ್ ವಾಹನದಲ್ಲಿ ನಾನು ಕರ್ತವ್ಯ ನಿರ್ವಹಿಸಿದ್ದು ಇರುವುದಿಲ್ಲ.

2. ನಾನು ತನಿಖಾಧಿಕಾರಿಗೆ 95 ಜನರ ಹೆಸರನ್ನು ನೀಡಿರುತ್ತೇನೆ. ಇದರಲ್ಲಿ ಕೆಲವರನ್ನು ನಾನೇ ಹೆಸರಿಸಿದ್ದು, ಕೆಲವು ಜನರನ್ನು ನಮ್ಮ ಪೊಲೀಸರ ಕಡೆಯಿಂದ ಮಾಹಿತಿ ಪಡೆದು ನೀಡಿರುತ್ತೇನೆ. ನಾನು ಈ ಪ್ರಕರಣದಲ್ಲಿ 15 ಜನರ ಹೆಸರು ಮತ್ತು ವಿಳಾಸವನ್ನು ನೀಡಿದ್ದೆನು. ನಾನು ಹೇಳಿಕೆಯನ್ನು ದಿಃ 07-12-2017 ರಂದು ತನಿಖಾಧಿಕಾರಿ ಆನಂದ್ ಮೂರ್ತಿ ಯವರ ಮುಂದೆ ನೀಡಿದ್ದೆನು. ಈ ಪ್ರಕರಣವು ದಿಃ 07-12-2017 ರಂದು ಆಗಿದೆ. ನಾನು ಹೇಳಿಕೆಯನ್ನು ದೂರು ದಾಖಲಾದ ನಂತರ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಮುದ್ದೆಮಾಲುಗಳನ್ನು ಘಟನಾ ಸ್ಥಳಗಳಿಂದ ಪಡೆದುಕೊಂಡು ಬಂದಿರುತ್ತೇವೆ. ನನ್ನನ್ನು ತನಿಖಾ ಸಹಾಯಕನಾಗಿ ಕರೆದುಕೊಂಡು ಹೋಗಿದ್ದರು. ಸಾಕ್ಷಿಯು ನನ್ನನ್ನು ತನಿಖಾ ಅಧಿಕಾರಿಯ ಸಹಾಯಕನಾಗಿ ಹೋಗಿದ್ದೆನು, ಬದಲಾಗಿ ತನಿಖಾ ಸಹಾಯಕನಾಗಿ ಹೋಗಿದ್ದು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಅಲ್ಲಿ ಜಪ್ತುಪಡಿಸಿದ ವಾಹನವನ್ನು ತೆಗೆದುಕೊಂಡು ಬರಲು ಹೋಗಿದ್ದೆನು. ಆ ಸಂದರ್ಭದಲ್ಲಿ ಈ ಮುದ್ದೆಮಾಲುಗಳನ್ನು ನಮಗೆ ತೋರಿಸಿರುತ್ತಾರೆ. ಈ ಮುದ್ದೆಮಾಲುಗಳು ಘಟನಾ ಸ್ಥಳದಲ್ಲಿ ಬಿದ್ದಿತ್ತು. ಸಾಕ್ಷಿಗೆ

ಹೈವೇ ಪೆಟ್ರೋಲ್ ವಾಹನ ಘಟನಾ ಸ್ಥಳದಲ್ಲಿ ಎಲ್ಲಿತ್ತು ಎಂದು ಕೇಳಿದಾಗ ಸಾಕ್ಷಿಯು ಪಂಚನಾಮೆ ನಡೆಸುವಾಗ ಹೈವೇ ಪೆಟ್ರೋಲ್ ವಾಹನ ಇರಲಿಲ್ಲ ಎಂದು ನುಡಿದಿರುತ್ತಾರೆ. ವಾಹನ ಜಪ್ತು ಪಂಚನಾಮೆಯನ್ನು ನಾವು ಮಾಡಿದ್ದ ಸಮಯ ನೆನಪಿರುವುದಿಲ್ಲ. ಸಾಕ್ಷಿಗೆ ನಿಪಿ.3 ರಿಂದ 5 ನ್ನು ತೋರಿಸಲಾಗಿ ಇದನ್ನು ಯಾವಾಗ ತೆಗೆದದ್ದು ಎಂದು ಕೇಳಿದಾಗ ಫೋಟೋಗಳು ಅಸ್ಪಷ್ಟವಾಗಿ ಇದೆ ಎಂದು ನುಡಿದಿರುತ್ತಾರೆ. ನಾನು ಆ ದಿವಸ ಘಟನಾ ಸ್ಥಳಕ್ಕೆ ಹೋದದ್ದು ಇಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಪಂಚನಾಮೆ ಆದದ್ದು ಇಲ್ಲ ಎಂದರೆ ಸರಿಯಲ್ಲ. ಆ ದಿವಸ ಯಾವುದೇ ಹೈವೇ ಪೆಟ್ರೋಲ್ ವಾಹನ ಜಖಂ ಆದದ್ದು ಇಲ್ಲ ಎಂದರೆ ಸರಿಯಲ್ಲ. ಈ ಆರೋಪಿತರು ಚಾಸಾ1 ರವರಿಗೆ ಕಲ್ಲು ಹೊಡೆದದ್ದು ಇಲ್ಲ ಎಂದರೆ ಸರಿಯಲ್ಲ. ಹಾಗೂ ಅವರು ನಮ್ಮ ಸರ್ಕಾರಿ ಕೆಲಸಕ್ಕೆ ತೊಂದರೆ ಪಡಿಸಿದ್ದು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎಸ್ ಜಿ ಹೆಚ್., ವಕೀಲರಿಂದಃ**

ಆ ದಿವಸ ಮುಖ್ಯಮಂತ್ರಿಗಳು ಬರುವ ಕಾರಣ ಪ್ರತಿಯೊಂದು ವಾಹನಗಳ ತಪಾಸಣೆ ಇತ್ತು ಎಂದರೆ ಸಾಕ್ಷಿಯು ಹೊನ್ನಾವರದಲ್ಲಿ ವಾಹನಗಳ ತಪಾಸಣೆ ಇರಲಿಲ್ಲ ಎಂದು ನುಡಿದಿರುತ್ತಾರೆ. ಅಂಗಡಿಯವರು ಅಥವಾ ಸ್ಥಳೀಯರು ನಮಗೆ ಲುಕ್ಸಾನು ಆಗಿದೆ ಎಂದು ಫಿರ್ಯಾದಿಯನ್ನು ನೀಡಿದ್ದು ಇಲ್ಲ ಎಂದರೆ ಸರಿ. ಗುಡ್ ಲಕ್ ಹೋಟೇಲ್ ನ ಮಾಲೀಕರು ದೂರನ್ನು ನೀಡಿದ್ದು ಇರುವುದಿಲ್ಲ. ಆ ಸಮಯದಲ್ಲಿ ಚಾಸಾ11 ರವರು ಎಸ್ ಹೆಚ್ ಓ ಆಗಿ ಇದ್ದರು. ಎಸ್ ಹೆಚ್ ಓ ರವರು ಈ ಬಗ್ಗೆ ಯಾವುದೇ ಫಿರ್ಯಾದನ್ನು ನೀಡಿದ್ದು ಇಲ್ಲ ಎಂದರೆ ಸರಿ. ಗಲಾಟೆಯಾದ ಸಂದರ್ಭದಲ್ಲಿ ಜನರನ್ನು ಪೊಲೀಸ್ ಠಾಣೆಗೆ ತಂದದ್ದು ಇಲ್ಲ. ಅಶ್ರುವಾಯು ಹಾಗೂ ಲಾಠಿ ಚಾರ್ಜ್ ಮಾಡಿದ್ದು ಇಲ್ಲ. ಕಾಂಗ್ರೆಸ್ ಸರ್ಕಾರ ಇರುವುದರಿಂದ ಹಿಂದೂಗಳ ಮೇಲೆ ಸುಳ್ಳು ಫಿರ್ಯಾದಿ ಹಾಕಿದ್ದೇವೆ ಎಂದರೆ ಸರಿಯಲ್ಲ. ಹಿಂದೂಗಳ್ಯಾರೂ ಘಟನಾ ಸ್ಥಳಕ್ಕೆ ಬಂದದ್ದು ಇಲ್ಲ ಹಾಗೂ ಪೊಲೀಸರಿಗೆ ಯಾರೂ ಹೊಡೆದದ್ದು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಮುದ್ದೆಮಾಲುಗಳನ್ನು ತೋರಿಸಲಾಗಿ ಇಂತಹ ಕಟ್ಟಿಗೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಇವುಗಳು ಕೇಸಿಗಾಗಿ ಸೃಷ್ಟಿಸಿದ ಮಾಲುಗಳು ಎಂದರೆ ಸರಿಯಲ್ಲ. ನಾನೇನೂ ವೈಯಕ್ತಿಕವಾಗಿ ಫಿರ್ಯಾದನ್ನು ಕೊಟ್ಟಿದ್ದು ಇರುವುದಿಲ್ಲ. ಯಾವುದೇ ಘಟನೆ ನಡೆಯದಿದ್ದ ಕಾರಣ ಯಾವುದೇ ದೂರನ್ನು ನೀಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾವು ಸರಿಯಾಗಿ ತನಿಖೆ ಮಾಡದೇ ಹಿಂದೂಗಳ ಮೇಲೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಇದಕ್ಕಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**C/c. ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**